# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಸದಸ್ಯರಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 98 (1007) |
| ಉತ್ತರಿಸುವ ಸಚಿವರು | : | ಮಾನ್ಯ ಸಕ್ಕರೆ ಹಾಗೂ ಜವಳಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 25.08.2026 |

*****

| ಕ್ರ.ಸಂ. | ಪ್ರಶ್ನೆ | ಮಾಹಿತಿ |
|---|---|---|
| (ಅ) | ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಭಾರತದ ಒಟ್ಟು ಜವಳಿ ರಫ್ತಿನಲ್ಲಿ ಶೇ.20 ರಷ್ಟು ಕೊಡುಗೆ ನೀಡುವ ಕರ್ನಾಟಕಕ್ಕೆ ಈ ಸಂಘರ್ಷದಿಂದ ಎಷ್ಟು ನಷ್ಟ ಉಂಟಾಗಿದೆ; ಈ ಕುರಿತು ಸರ್ಕಾರ (ಇಲಾಖೆ) ಕೈಗೊಂಡಿರುವ ಕ್ರಮವೇನು; | ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಭಾರತದ ಒಟ್ಟು ಜವಳಿ ರಫ್ತಿನಲ್ಲಿ ಶೇ.20 ರಷ್ಟು ಕೊಡುಗೆ ನೀಡುವ ಕರ್ನಾಟಕಕ್ಕೆ ಈ ಸಂಘರ್ಷದಿಂದ ನಷ್ಟ ಉಂಟಾಗಿರುವ ಕುರಿತು ಹಾಗೂ ವಿಶ್ವೇಶ್ವರಯ್ಯ ರಫ್ತು ಉತ್ತೇಜನಾ ಸಂಸ್ಥೆ (ವಿಟಿಪಿಸಿ) ಮತ್ತು ಕೈಮಗ್ಗ ಮತ್ತು ಜವಳಿ ಇಲಾಖೆಯ ಮೂಲಕ ಕೈಗೊಂಡಿರುವ ಕ್ರಮಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |
| (ಆ) | ದೇಶ್ಯಾದ್ಯಂತ ಏಳು ಸ್ಥಳಗಳಲ್ಲಿ ಒಂದಾದ ಕಲಬುರುಗಿಯಲ್ಲಿ "Pradhan Mantri Mega Integrated Textile Region and Apparel (PM MITRA)" ಯೋಜನೆಯಲ್ಲಿ ಕೇಂದ್ರದ ಪಾಲು ಮತ್ತು ರಾಜ್ಯದ ಪಾಲು ಎಷ್ಟು; | PM-MITRA Park Karnataka Ltd ಈ ಎಸ್.ಪಿ.ವಿ ಕಂಪನಿಯಲ್ಲಿ ರಾಜ್ಯ ಸರ್ಕಾರದ ಷೇರು ಶೇ.51 ರಷ್ಟು ಹಾಗೂ ಕೇಂದ್ರ ಸರ್ಕಾರದ ಷೇರು ಶೇ.49 ರ ಅನುಪಾತದಲ್ಲಿ ಹೂಡಬೇಕಾಗಿರುತ್ತದೆ. ರಾಜ್ಯ ಸರ್ಕಾರದ ಷೇರು ಬಂಡವಾಳ ರೂ.5.10 ಕೋಟಿ ಹಾಗೂ ಕೇಂದ್ರ ಸರ್ಕಾರದ ಷೇರು ಬಂಡವಾಳ ರೂ.4.90 ಕೋಟಿ ಹೀಗೆ ಒಟ್ಟು ರೂ.10.00 ಕೋಟಿಗಳ ಷೇರು ಬಂಡವಾಳವನ್ನು ಹೂಡಲಾಗಿರುತ್ತದೆ. |
| (ಇ) | ಈ ಯೋಜನೆಗೆ ಕೇಂದ್ರ ಸರ್ಕಾರದ ವತಿಯಿಂದ ಎಷ್ಟು ಅನುದಾನ ಸ್ವೀಕರಿಸಲಾಗಿದೆ ಮತ್ತು ಈ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ? (ಮಾಹಿತಿ ನೀಡುವುದು) | ಮಾರ್ಚ್–2025 ರಲ್ಲಿ, ಕೇಂದ್ರ ಸರ್ಕಾರದ ಷೇರು ಬಂಡವಾಳವಾಗಿ ರೂ.4.90 ಕೋಟಿಯನ್ನು PM-MITRA Park Karnataka Ltd ಈ ಎಸ್.ಪಿ.ವಿ ಕಂಪನಿಯಲ್ಲಿ ಹೂಡಲಾಗಿರುತ್ತದೆ.<br><br>ಕಲಬುರಗಿ ಜಿಲ್ಲೆಯಲ್ಲಿ PM-MITRA ಮೆಗಾ ಜವಳಿ ಪಾರ್ಕ್ ನ್ನು ಅನುಷ್ಠಾನಗೊಳಿಸಲು ಸನ್ಮಾನ್ಯ ಪ್ರಧಾನ ಮಂತ್ರಿಗಳು ದಿನಾಂಕ:17.03.2023 ರಂದು ಘೋಷಿಸಿರುತ್ತಾರೆ. ಮುಂದುವರೆದು, 1000 ಎಕರೆ ಜಮೀನನ್ನು ಇದೇ ಉದ್ದೇಶಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಸ್ಥಾಪಿಸಿರುವ ಎಸ್.ಪಿ.ವಿ ಹೆಸರಿಗೆ ವರ್ಗಾಯಿಸಿ Environmental Clearance (EC) ಯನ್ನು ದಿನಾಂಕ: 27.10.2025 ರಂದು ಹಾಗೂ Consent for Establishment (CFE) ಅನ್ನು ದಿನಾಂಕ:20.07.2026 ರಂದು ಪಡೆಯಲಾಗಿರುತ್ತದೆ.<br><br>ರಾಜ್ಯ ಸರ್ಕಾರದಿಂದ ಸದರಿ ಪಾರ್ಕ್‌ನ ಗೇಟ್‌ನವರೆಗೆ ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಪವರ್ ಸ್ಟೇಷನ್, ನೀರು (ಬ್ಯಾರೇಜ್ ನಿರ್ಮಾಣ ಮತ್ತು ಪೈಪ್‌ಲೈನ್) ಕಾಮಗಾರಿಗಳಿಗಾಗಿ ರೂ.390.26 ಕೋಟಿಗಳನ್ನು (ರೂ.150.00 ಕೋಟಿಗಳನ್ನು ಕಲ್ಯಾಣ |

| | | |
|---|---|---|
| | | ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (KKRDB) ಯಿಂದ ಹಾಗೂ ಬಾಕಿ ಮೊತ್ತವನ್ನು ರಾಜ್ಯ ಸರ್ಕಾರದ ಆಯವ್ಯಯದಿಂದ) ಭರಿಸಲು ಸಚಿವ ಸಂಪುಟದ ಸಭೆಯಲ್ಲಿ ಅನುಮೋದಿಸಿ, ಸರ್ಕಾರದ ಆದೇಶವಾಗಿರುತ್ತದೆ. ಅದರನ್ವಯ, ಕೆಕೆಆರ್‌ಡಿಬಿ 2024–25ನೇ ಸಾಲಿನ & 2025–26ನೇ ಸಾಲಿನ ಕ.ಕ.ಪ್ರ.ಅ ಮಂಡಳಿಯ ಕಲಬುರಗಿ ಜಿಲ್ಲೆಯ ಮ್ಯಾಕ್ರೋ ಯೋಜನೆ ಅಡಿಯಲ್ಲಿ ಮಂಜೂರಾತಿ ನೀಡಿದ ಕಾಮಗಾರಿಗಳಿಗೆ ನಿಗಧಿಪಡಿಸಿದ ಅನುದಾನ ರೂ.50.90 ಕೋಟಿಗಳ ಪೈಕಿ ರೂ.45.81 ಕೋಟಿಗಳು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದೆ. ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ರೂ.50.00 ಕೋಟಿ ಗಳನ್ನು ಅನುಷ್ಠಾನ ಇಲಾಖೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.<br><br>2026–27ನೇ ಸಾಲಿಗೆ ರೂ.75.00 ಕೋಟಿಗಳನ್ನು ರಾಜ್ಯ ಸರ್ಕಾರದ ಆಯವ್ಯಯ ಹಾಗೂ ರೂ.50.00 ಕೋಟಿಗಳನ್ನು ಕೆ.ಕೆ.ಆರ್.ಡಿ.ಬಿ ರವರಿಂದ ಪಾರ್ಕ್‌ನ ಬಾಹ್ಯ ಮೂಲಭೂತ ಕಾಮಗಾರಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.<br><br>ಸರ್ಕಾರದ ಆದೇಶ ದಿನಾಂಕ:04.07.2026 ರಲ್ಲಿ ಕಲಬುರಗಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ PM-MITRA ಜವಳಿ ಪಾರ್ಕ್ ಸ್ಥಾಪನೆಗೆ ಪ್ರಸ್ತುತ ಸಾರ್ವಜನಿಕ–ಖಾಸಗಿ ಸಹಹಭಾಗಿತ್ವದ (ಪಿಪಿಪಿ) ಮಾದರಿಯಿಂದ ಬದಲಾವಣೆ ಮಾಡಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ರವರ ಸಂಪನ್ಮೂಲದಿಂದ ಎರಡು ಹಂತಗಳಲ್ಲಿ ಒಟ್ಟು ಅಂದಾಜು ಯೋಜನಾ ಮೊತ್ತ ರೂ.1700.00 ಕೋಟಿಗಳಲ್ಲಿ ಅಭಿವೃದ್ಧಿಪಡಿಸಲು ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ.<br><br>ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಗಿಂತ KIADB ಮೂಲಕ ಯೋಜನೆಯನ್ನು ಅನುಷ್ಠಾನ ಗೊಳಿಸುವುದರಿಂದ ಉಂಟಾಗುವ ಯೋಜನೆಯ ಅನುಷ್ಠಾನದ ವೇಗ, ಸುಲಭ ನಿರ್ವಹಣೆ ಹಾಗೂ ದೀರ್ಘ ಕಾಲೀನ ಪ್ರಯೋಜನಗಳ ಸಮರ್ಥನೀಯ ಕಾರಣಗಳೊಂದಿಗೆ ಭಾರತ ಸರ್ಕಾರದ ಜವಳಿ ಮಂತ್ರಾಲಯಕ್ಕೆ ಸಲ್ಲಿಸಲಾಗಿದ್ದು, ಪ್ರಾಜೆಕ್ಟ್ ಅಪ್ರೂವಲ್ ಕಮಿಟಿ (PAC) ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. |

**ಸಂಖ್ಯೆ: CI 218 JAKE 2026**

(ರುದ್ರಪ್ಪ ಮಾನಪ್ಪ ಲಮಾಣಿ)
ಜವಳಿ ಮತ್ತು ಸಕ್ಕರೆ ಸಚಿವರು

# ಅನುಬಂಧ

1. **ವಿಶ್ವೇಶ್ವರಯ್ಯ ರಫ್ತು ಉತ್ತೇಜನಾ ಸಂಸ್ಥೆ (ವಿಟಿಪಿಸಿ):-** ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ, ಕರ್ನಾಟಕದಿಂದ ಜವಳಿ ರಫ್ತು ಕುಸಿದಿದೆ, ವಿವರಗಳು ಇಂತಿವೆ:-

**Value in Mn. USD**

| Sl. No. | Year | Value | Year | Value | Growth |
|---|---|---|---|---|---|
| 1. | 2024-25 | 2455.66 **(Rs.23,490.19 crore)** | 2025-26 | 2441.08 **(Rs.23,350.72 Crore)** | -0.58% |
| 2. | 2025-26 First quarter (April to June) | 644.10 **(Rs.6,161.53 crore)** | 2026-27 First quarter (April to June) | 573.04 **(Rs.5,481.76 crore)** | -11.03% |

ಇದಲ್ಲದೆ, 2025-26 ಹಣಕಾಸು ವರ್ಷದಲ್ಲಿ ಭಾರತದ ಜವಳಿ ರಫ್ತು ಆದಾಯವು 2024-25 ಹಣಕಾಸು ವರ್ಷಕ್ಕೆ ಹೋಲಿಸಿದರೆ 1.28% ಕುಸಿತವನ್ನು ದಾಖಲಿಸಿದೆ.

ಅಲ್ಲದೆ, 2026-27 ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಭಾರತದ ಜವಳಿ ರಫ್ತು ಆದಾಯವು 2025-26 ಹಣಕಾಸು ವರ್ಷದ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ 8.34% ಕುಸಿತವನ್ನು ದಾಖಲಿಸಿದೆ.

**ರಾಜ್ಯದಿಂದ ರಫ್ತುಗಳನ್ನು ಉತ್ತೇಜಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ತೆಗೆದುಕೊಂಡ ಕ್ರಮಗಳು:-**

- ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರೋತ್ಸಾಹ, ರಫ್ತು ಉತ್ತೇಜನ ಯೋಜನೆಗಳು ಮತ್ತು ಇತರ ರಫ್ತು ಬೆಂಬಲ ಯೋಜನೆಗಳ ಬಗ್ಗೆ ರಫ್ತುದಾರರಿಗೆ ತಿಳಿಸಲು ರಫ್ತು ನಿರ್ವಹಣಾ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.
- ಈ ಕಾರ್ಯಕ್ರಮಗಳನ್ನು ರಫ್ತು ಉತ್ತೇಜನ ಮಂಡಳಿಗಳು (Export Promotion Councils), ವಿದೇಶಿ ವ್ಯಾಪಾರ ನಿರ್ದೇಶನಾಲಯ (DGFT) ಮತ್ತು ಕರ್ನಾಟಕ ಸರ್ಕಾರದ ಕೈಮಗ್ಗ ಮತ್ತು ಜವಳಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಲಾಗಿದೆ.
- ಭಾರತದ ಜವಳಿ ರಫ್ತು ವಿಷನ್-2030 ರಡಿ ರಾಜ್ಯದ ಪ್ರಸ್ತುತ ರಫ್ತನ್ನು **USD 2.8 billion ನಿಂದ USD 8.00 billion** ಸಾಧಿಸುವ ಗುರಿಯನ್ನು ನಿಗದಿಪಡಿಸಿ, State Export Action Plan (SEAP) ರೂಪಿಸಲಾಗಿದೆ.
- ಜವಳಿ/ ಸಿದ್ಧ ಉಡುಪು ಉತ್ಪನ್ನಗಳ ರಫ್ತನ್ನು ಉತ್ತೇಜಿಸಲು ಅನುವಾಗುವಂತೆ, ರಾಜ್ಯದಲ್ಲಿನ Champion Districts ಆಗಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಹಾಸನ ಮತ್ತು Aspirational Districts ಆಗಿ ಬಾಗಲಕೋಟೆ, ಹಾವೇರಿ, ಗದಗ, ಬಳ್ಳಾರಿ ಗಳನ್ನು ಗುರುತಿಸಿ ರಾಜ್ಯ ರಫ್ತು ಕ್ರಿಯಾ ಯೋಜನೆಯನ್ನು ರೂಪಿಸಿದೆ.
- ಜವಳಿ/ ಸಿದ್ಧ ಉಡುಪು ಘಟಕಗಳನ್ನು ಪ್ರೋತ್ಸಾಹಿಸಲು ಪ್ರತಿ 05 ವರ್ಷಗಳಿಗೊಮ್ಮೆ ಜವಳಿ ಮತ್ತು ಸಿದ್ಧ ಉಡುಪು ನೀತಿಗಳನ್ನು ರೂಪಿಸಿ, ಸಣ್ಣ, ಅತಿ ಸಣ್ಣ, ಮಧ್ಯಮ ಮತ್ತು ಬೃಹತ್ ಜವಳಿ ಕೈಗಾರಿಕೆಗಳಿಗೆ ಪ್ರೋತ್ಸಾಹನ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ.
- ರಾಜ್ಯದಲ್ಲಿ ಜವಳಿ ಹಾಗೂ ನೇಕಾರಿಕೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಜಿಸಲು ಮತ್ತು ಉದ್ಯಮಿ ಸ್ನೇಹಿ ನೂತನ ಜವಳಿ ನೀತಿ 2025-30 ಅನ್ನು ರೂಪಿಸಲು ಕ್ರಮವಹಿಸಲಾಗುತ್ತಿದೆ.

ಅಪರ ನಿರ್ದೇಶಕರು (ಜವಳಿ ನೀತಿ),
ಕೈಮಗ್ಗ ಮತ್ತು ಜವಳಿ